ಶ್ರೀ ರಾಮಲಿಂಗಾರೆಡ್ಡಿ: ಬಸ್ ಸ್ಟ್ಯಾಂಡ್ ಕಟ್ಟುವುದಕ್ಕೆ ಕೆಲಸ ಪ್ರಾರಂಭ ಮಾಡಿದ ಮೇಲೆ ಅಲ್ಲಿ ಯಾರೋ ಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾರೆ. ಕಾಂಕ್ರೀಟಿಂಗ್, ಬೋರ್‌ವೆಲ್ ಹೀಗೆ ಬೇರೆ ಕೆಲಸಗಳು ಅಲ್ಲಿ ನಡೆಯುತ್ತಿವೆ. ಎರಡು ಭಾಗದಲ್ಲಿ ಮಾತ್ರ ಕೋರ್ಟನಲ್ಲಿ ಸ್ಟೇ ಇದೆ ಎಂದು ಅದನ್ನು ಪೆಂಡಿಂಗ್ ಇಟ್ಟಿದ್ದೇವೆ. ನಮ್ಮ ವಕೀಲರೂ ಕೂಡ ಅದನ್ನು pursue ಮಾಡಿ, ಬೇಗ stay vacate ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇನ್ನು ಬಸ್ಸುಗಳ ವಿಚಾರವನ್ನು ಹೇಳಬೇಕೆಂದರೆ, ಈಗ ತಕ್ಷಣಕ್ಕೆ ಎರಡು ಬಸ್ಸುಗಳನ್ನು ಕೊಟ್ಟಿದ್ದೇವೆ. ನರ್ಮ ಸ್ಕೀಂನಲ್ಲಿ ಬಸ್ಸುಗಳು ಬರುತ್ತವೆ, ಆಗ ಅವರಿಗೆ ಅವರು ಕೇಳಿದಷ್ಟು ಕೊಡೋಣ.

ಅಧ್ಯಕ್ಷರು; ಆಯಿತು.

ಆರೋಗ್ಯ ಸಮುದಾಯ ಕೇಂದ್ರದ ಕಟ್ಟಡ

123 (404); ಶ್ರೀ ಯಾವಗಲ್ ಬಿ. ಆರ್. (ನರಗುಂದ)

(ಅ) ನರಗುಂದದಲ್ಲಿ ನಿರ್ಮಾಣವಾಗುತ್ತಿರುವ ಆರೋಗ್ಯ ಸಮುದಾಯ ಕೇಂದ್ರದ ಕಟ್ಟಡದ ಕಾಮಗಾರಿ ಯಾವ ಹಂತದಲ್ಲಿದೆ.

(ಆ) ಈ ಕಾಮಗಾರಿಗೆ ಖರ್ಚಾಗುವ ಮೊತ್ತವೆಷ್ಟು; ಹಾಗೂ ಯಾವಾಗ ಕಾಮ ಗಾರಿ ಪೂರ್ಣಗೊಳಿಸಲಾಗುವುದು?

ಶ್ರೀ ಯು. ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

(ಅ) ನರಗುಂದದಲ್ಲಿ ನಿರ್ಮಾಣವಾಗುತ್ತಿರುವ 100 ಹಾಸಿಗೆಗಳ ತಾಲ್ಲೂಕು ಮಟ್ಟದ ಆಸ್ಪತ್ರೆ ಕಟ್ಟಡದ ನೆಲಮಹಡಿ ಹಾಗೂ ಮೊದಲನೇ ಮಹಡಿಗೆ ಆರ್. ಸಿ. ಸಿ. ಛಾವಣಿ ಹಾಕಲಾಗಿದೆ. ನೆಲಮಹಡಿಯ ನೆಲಹಾಸು, ಗೋಡೆಗೆ ಟೈಲ್ಸ್ ಹಾಕುವುದು ಮತ್ತು ಪ್ಲಂಬಿಂಗ್ ಕೆಲಸಗಳು ಪ್ರಗತಿಯಲ್ಲಿರುತ್ತವೆ. ಮೊದಲನೆಯ ಮಹಡಿಯ ಗಿಲಾವ ಕೆಲಸ ಪ್ರಗತಿ ಯಲ್ಲಿದೆ.

(ಆ) ಈ ಕಾಮಗಾರಿಯ ಒಟ್ಟು ಗುತ್ತಿಗೆಯ ಮೊತ್ತ `809.58 ಲಕ್ಷಗಳು. ಈ ಕಾಮಗಾರಿಯನ್ನು ಮಾರ್ಚ್–2015ರ ಅಂತ್ಯಕ್ಕೆ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು.

ಶ್ರೀ ಯಾವಗಲ್ ಬಿ. ಆರ್.: ಕಳೆದ ಐದು ತಿಂಗಳಿಂದ ಅಲ್ಲಿ ಕೆಲಸ ನಿಂತುಬಿಟ್ಟಿದೆ. ಸುಮಾರು 1 ಕೋಟಿ 33 ಲಕ್ಷ ರೂ. ಗಳ ಪೆಂಡಿಂಗ್ ಬಿಲ್ಸ್ ಇದೆ. ಆ ದುಡ್ಡನ್ನು ಅವರಿಗೆ ಕೊಡದೇ ಅವರು ಕೆಲಸವನ್ನು ಮಾಡಲು ಸಾಧ್ಯವಿಲ್ಲ. ಅದಕ್ಕಾಗಿ, ದಯವಿಟ್ಟು ಆ ದುಡ್ಡನ್ನು ಯಾವಾಗ ಕೊಡುತ್ತೀರಿ, ಈ ಕೆಲಸವನ್ನು ಯಾವಾಗ ಮುಗಿಸುತ್ತೀರಿ ಎನ್ನುವುದನ್ನು ಹೇಳಬೇಕು.

ಅಧ್ಯಕ್ಷರು: ಮಾರ್ಚ್ 2015ರ ಅಂತ್ಯಕ್ಕೆ ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು ಎಂದು ಹೇಳಿದ್ದಾರಲ್ಲ?

ಶ್ರೀ ಯಾವಗಲ್ ಬಿ. ಆರ್.: ಬಿಲ್ ಕೊಟ್ಟಿಲ್ಲ, ಅಧ್ಯಕ್ಷರೆ,

ಅಧ್ಯಕ್ಷರು: ಬಿಲ್‌ನ ವಿಚಾರ ನಿಮಗೇತಕ್ಕೆ? ಅದನ್ನು ಅವರು ನೋಡಿಕೊಳ್ಳುತ್ತಾರೆ.

ಶ್ರೀ ಯಾವಗಲ್ ಬಿ. ಆರ್.: ಕೆಲಸವನ್ನು ಬಂದ್ ಮಾಡಿದ್ದಾರೆ. ಬಿಲ್ ಕೊಡದೇ ಕೆಲಸವನ್ನು ಮಾಡುವುದೇ ಇಲ್ಲ.

ಶ್ರೀ ಯು. ಟಿ. ಖಾದರ್: 8 ಕೋಟಿ 9 ಲಕ್ಷ ರೂ. ಗಳ ವೆಚ್ಚದಲ್ಲಿ ಈ ಕೆಲಸವನ್ನು ಪ್ರಾರಂಭಿಸಲಾಯಿತು. ಈಗ 4 ಕೋಟಿ 20 ಲಕ್ಷ ರೂ.ಗಳ ಕೆಲಸ ಮುಗಿದಿದ್ದು 80 ಲಕ್ಷದ ಬಿಲ್ ಪೆಂಡಿಂಗ್ ಇದೆ. ನಮಗೆ ಅನುದಾನದ ಕೊರತೆಯಿದ್ದು, ಈಗಾಗಲೇ ನಾವು ಹಣಕಾಸು ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ. ಆ ಇಲಾಖೆಯಿಂದ ಬಂದ ತಕ್ಷಣ ಕೆಲಸವನ್ನು ಮುಗಿಸುತ್ತೇವೆ. ಅದನ್ನು 2014ರಲ್ಲಿ ಮುಗಿಸಬೇಕಿತ್ತು. ಸ್ವಲ್ಪ ತಡವಾದ ಕಾರಣ ಅದನ್ನು 2015ರಲ್ಲಿ ಮುಗಿಸಿಕೊಡುತ್ತೇವೆ.

ಶ್ರೀ ಯಾವಗಲ್ ಬಿ. ಆರ್.: ಐದು ತಿಂಗಳಿಂದ ಕೆಲಸ ಬಂದ ಇದೆ. ಅದರ ಬಗ್ಗೆ ಗಮನಹರಿಸಿ, ಅಷ್ಟಿಷ್ಟು ಹಣವನ್ನಾದರೂ ಬಿಡುಗಡೆ ಮಾಡಿಸಿ, ದಯವಿಟ್ಟು ಕೆಲಸವನ್ನು ಪ್ರಾರಂಭ ಮಾಡಿಸಿ.

ಶ್ರೀ ಯು. ಟಿ. ಖಾದರ್: ಐದು ತಿಂಗಳಿಂದ ಕೆಲಸ ಬಂದ್ ಇರುವುದನ್ನು ಈಗ ನನ್ನ ಗಮನಕ್ಕೆ ತಂದಿದ್ದಾರೆ. ಅದನ್ನು ಆದಷ್ಟು ಬೇಗ ಪ್ರಾರಂಭ ಮಾಡಿಸುತ್ತೇನೆ.

ಎ.ಪಿ.ಎಲ್ ಮತ್ತು ಬಿ.ಪಿ.ಎಲ್ ಪಡಿತರ ಚೀಟಿಗಳ ವಿತರಣೆ:

124 (201); ಶ್ರೀ ಕೋಳಿವಾಡ ಕೆ. ಬಿ. (ರಾಣೇಬೆನ್ನೂರು)

(ಅ) ರಾಜ್ಯದಲ್ಲಿ ಎಪಿಎಲ್ ಮತ್ತು ಬಿಪಿಎಲ್ ಪಡಿತರ ಚೀಟಿಗಳನ್ನು ಎಷ್ಟು ದಿನಗಳಲ್ಲಿ ನೀಡಲಾಗುವುದು;

(ಆ) ಹಾಗಿದ್ದಲ್ಲಿ, ಸರ್ಕಾರ ಭರವಸೆ ನೀಡಲಾಗಿರುವುದು ನಿಜವೇ;

(ಇ) ಇಲ್ಲಿಯವರೆವಿಗೂ ಸಹಿತ ಪಡಿತರ ಚೀಟಿಗಳ ಗೊಂದಲ ನಿವಾರಣೆ ಆಗದೇ ಇರುವುದಕ್ಕೆ ಕಾರಣವೇನು? (ವಿವರ ಒದಗಿಸುವುದು)

ಶ್ರೀ ದಿನೇಶ್ ಗುಂಡೂರಾವ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಸಚಿವರು)

(ಅ) ರಾಜ್ಯದಲ್ಲಿ ಹೊಸ ಪಡಿತರ ಚೀಟಿ ಕೋರಿ 39,33,330 ಅರ್ಜಿಗಳು ಸ್ವೀಕೃತವಾಗಿದ್ದು, ಈ ಪೈಕಿ 11,36,874 ಪಡಿತರ ಚೀಟಿಗಳನ್ನು ವಿತರಿಸ ಲಾಗಿದೆ. ಬಾಕಿ ಇರುವ ಅರ್ಜಿಗಳನ್ನು FIFO (First in – First out) ಮಾದರಿಯಲ್ಲಿ ಮುಂದಿನ ಮೂರು ತಿಂಗಳೊಳಗೆ ವಿಲೆಗೊಳಿಸಲು ಕ್ರಮವಹಿಸಲಾಗುತ್ತಿದೆ.

(ಆ) ಪಡಿತರ ಚೀಟಿ ವಿತರಣೆಯು ನಿರಂತರ ನಡೆಯುವ ಪ್ರಕ್ರಿಯೆಯಾಗಿದೆ. ಆದಾಗ್ಯೂ, ಬಾಕಿ ಇರುವ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಎಲ್ಲ ಪ್ರಯತ್ನಗಳನ್ನು ಮಾಡಲಾಗುತ್ತಿದೆ.